All India Radio: Bangalore
National Bulletin In Kannada
22.08.2025 7.35am
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು

೧. ಪ್ರಧಾನಿ ನರೇಂದ್ರ ಮೋದಿ ಇಂದು ಬಿಹಾರ ಮತ್ತು ಪಶ್ಚಿಮ ಬಂಗಾಳಕ್ಕೆ ಭೇಟಿ ; ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಚಾಲನೆ

೨. ಉಪರಾಷ್ಟ್ರಪತಿ ಚುನಾವಣೆ; ಇಬ್ಬರು ವೀಕ್ಷಕರನ್ನು ನೇಮಿಸಿದ ಚುನಾವಣಾ ಆಯೋಗ

೩. ಕಲ್ಲಿದ್ದಲು ಆಮದು ಶೇಕಡಾ ೯ರಷ್ಟು ಕಡಿತ - ಕೇಂದ್ರ ಸಚಿವ ಜಿ.ಕಿಶನ್ ರೆಡ್ಡಿ

೪. ಶ್ರೀನಗರದಲ್ಲಿ ಮೊಟ್ಟಮೊದಲ ಖೇಲೋ ಇಂಡಿಯಾ ಜಲಕ್ರೀಡೆಗಳ ಉತ್ಸವಕ್ಕೆ ಕೇಂದ್ರ ಸಚಿವ ಮನುಸುಖ್ ಮಂಡವಿಯಾ ಚಾಲನೆ

><><><><><><><

ಪ್ರಧಾನಮಂತ್ರಿ ನರೇಂದ್ರ ಮೋದಿ ಇಂದು ಬಿಹಾರ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳಿಗೆ ಭೇಟಿ ನೀಡಲಿದ್ದಾರೆ. ಬಿಹಾರದ ಗಯಾದಲ್ಲಿ ಪ್ರಧಾನಿ, ೧೩ ಸಾವಿರ ಕೋಟಿ ರೂಪಾಯಿಯ ಮೌಲ್ಯದ ಹಲವು ಅಭಿವೃದ್ಧಿ ಯೋಜನೆಗಳಿಗೆ ಶಂಕುಸ್ಥಾಪನೆ ಹಾಗೂ ಉದ್ಘಾಟನೆ ನೆರವೇರಿಸಲಿದ್ದಾರೆ. ಇದೇ ವೇಳೆ ಅವರು ಎರಡು ರೈಲುಗಳಿಗೆ ಹಸಿರು ನಿಶಾನೆ ತೋರಿ, ಸಾರ್ವಜನಿಕರನ್ನುದ್ದೇಶಿಸಿ ಭಾಷಣ ಮಾಡಲಿದ್ದಾರೆ. ಬಳಿಕ, ಅವರು ಗಂಗಾ ನದಿಯ ಮೇಲಿರುವ ಔಂಟಾ-ಸಿಮಾರಿಯಾ ಸೇತುವೆ ಯೋಜನೆ ಉದ್ಘಾಟಿಸಲಿದ್ದಾರೆ. ಈ ಸೇತುವೆ ಪಟ್ನಾದ ಮೋಕಾಮಾ ಮತ್ತು ಬೇಗುಸರಾಯಿಯನ್ನು ನೇರವಾಗಿ ಸಂಪರ್ಕಿಸುತ್ತದೆ. ಪ್ರಧಾನಮಂತ್ರಿ ಮೋದಿ ಅವರು ಚತುಷ್ಪಥ ಬಖ್ತಿಯಾರ್‌ಪುರ್ - ಮೋಕಾಮಾ ರಾಷ್ಟ್ರೀಯ ಹೆದ್ದಾರಿ-೩೧ರ ಭಾಗವನ್ನು ಉದ್ಘಾಟಿಸಲಿದ್ದಾರೆ. ಇದರಿಂದ ಸಂಚಾರದ ದಟ್ಟಣೆ ಕಡಿಮೆಯಾಗಲಿದ್ದು, ಪ್ರಯಾಣದ ಸಮಯ ಉಳಿತಾಯವಾಗಲಿದೆ. ಅವರು ಬಕ್ಸಾರ್ ಉಷ್ಣ ವಿದ್ಯುತ್ ಸ್ಥಾವರವನ್ನು ಉದ್ಘಾಟಿಸಲಿದ್ದಾರೆ. ಇದು ವಿದ್ಯುತ್ ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸುವುದು ಮಾತ್ರವಲ್ಲದೇ, ಇಂಧನ ಭದ್ರತೆ ಮತ್ತು ಈ ಭಾಗದ ವಿದ್ಯುತ್ ಅಗತ್ಯಗಳಿಗೆ ಪೂರಕವಾಗಲಿದೆ. ಬಿಹಾರ ಮತ್ತು ಸುತ್ತಮುತ್ತಲಿನ ರಾಜ್ಯಗಳ ರೋಗಿಗಳಿಗೆ ಸುಲಭ ಮತ್ತು ಕೈಗೆಟಕುವ ಕ್ಯಾನ್ಸರ್ ಚಿಕಿತ್ಸೆ ಒದಗಿಸಲು ಸಹಕಾರಿಯಾಗಲಿರುವ ಮುಜಫರ್‌ಪುರದಲ್ಲಿರುವ ಹೊಮಿ ಭಾಬಾ ಕ್ಯಾನ್ಸರ್ ಆಸ್ಪತ್ರೆ ಮತ್ತು ಸಂಶೋಧನಾ ಕೇಂದ್ರವನ್ನು ಪ್ರಧಾನಿ ಉದ್ಘಾಟಿಸಲಿದ್ದಾರೆ. ನಮಾಮಿ ಗಂಗೆ ಯೋಜನೆಯಡಿಯಲ್ಲಿ ಮುಂಗೇರಿನಲ್ಲಿ ನಿರ್ಮಿಸಲಾದ ಕೊಳಚೆ ನೀರು ಶುದ್ಧೀಕರಣ ಘಟಕ ಮತ್ತು ಒಳಚರಂಡಿ ಜಾಲವನ್ನು ಅವರು ಉದ್ಘಾಟಿಸಲಿದ್ದಾರೆ. ಪ್ರಧಾನಮಂತ್ರಿ ಅವರು ಗಯಾ - ದೆಹಲಿ ನಡುವೆ ಅಮೃತ ಭಾರತ ಎಕ್ಸ್‌ಪ್ರೆಸ್ ಹಾಗೂ ವೈಶಾಲಿ - ಕೊಡರ್ಮಾ ನಡುವೆ ಬೌದ್ಧ ಸರ್ಕ್ಯೂಟ್ ರೈಲುಗಳ ಉದ್ಘಾಟನೆ ನೆರವೇರಿಸುವರು. ಪಿಎಂ ಆವಾಸ-ಗ್ರಾಮೀಣ ಯೋಜನೆಯಡಿಯಲ್ಲಿ ೧೨ ಸಾವಿರ ಗ್ರಾಮೀಣ ಫಲಾನುಭವಿಗಳು ಮತ್ತು ಪಿಎಂ ಆವಾಸ-ನಗರ ಯೋಜನೆಯಡಿಯಲ್ಲಿ ೪ ಸಾವಿರದ ೨೬೦

ಫಲಾನುಭವಿಗಳಿಗೆ ಗೃಹ ಪ್ರವೇಶ ಕಾರ್ಯಕ್ರಮ ನಡೆಯಲಿದೆ. ಸಂಜೆ ಪಶ್ಚಿಮ ಬಂಗಾಳಕ್ಕೆ ಭೇಟಿ ನೀಡಲಿರುವ ಪ್ರಧಾನಿ, ಕೊಲ್ಕತ್ತಾದಲ್ಲಿ ಹೊಸದಾಗಿ ನಿರ್ಮಿಸಲಾದ ಮೆಟ್ರೋ ಮಾರ್ಗಗಳಲ್ಲಿ ಮೆಟ್ರೋ ಸೇವೆಗಳಿಗೆ ಚಾಲನೆ ನೀಡುವರು. ನಂತರ ಅವರು ಕೊಲ್ಕತ್ತಾದಲ್ಲಿ ೫ ಸಾವಿರದ ೨೦೦ ಕೋಟಿ ರೂಪಾಯಿಗಳ ಮೌಲ್ಯದ ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಶಂಕುಸ್ಥಾಪನೆ ಮತ್ತು ಉದ್ಘಾಟನೆ ನೆರವೇರಿಸಲಿದ್ದು, ಈ ಸಂದರ್ಭದಲ್ಲಿ ಅವರು ಸಾರ್ವಜನಿಕರನ್ನುದ್ದೇಶಿಸಿ ಭಾಷಣ ಮಾಡಲಿದ್ದಾರೆ.

><><><><><><><

ಮುಂಬರುವ ಉಪರಾಷ್ಟ್ರಪತಿ ಚುನಾವಣೆಗೆ ಚುನಾವಣಾ ಆಯೋಗ ಇಬ್ಬರು ವೀಕ್ಷಕರನ್ನು ನೇಮಿಸಿದೆ. ಪಂಚಾಯತ್ ರಾಜ್ ಸಚಿವಾಲಯದ ಹೆಚ್ಚುವರಿ ಕಾರ್ಯದರ್ಶಿ ಸುಶೀಲ್ ಕುಮಾರ್ ಲೋಹಾನಿ ಮತ್ತು ಹಣಕಾಸು ಸಚಿವಾಲಯದ ಹೆಚ್ಚುವರಿ ಕಾರ್ಯದರ್ಶಿ ಡಿ. ಆನಂದನ್ ಅವರನ್ನು ವೀಕ್ಷಕರಾಗಿ ನೇಮಕ ಮಾಡಲಾಗಿದೆ. ಉಪರಾಷ್ಟ್ರಪತಿ ಚುನಾವಣೆ ಸೆಪ್ಟೆಂಬರ್ ೯ರಂದು ನಡೆಯಲಿದೆ. ಉಪರಾಷ್ಟ್ರಪತಿಯನ್ನು ಲೋಕಸಭೆ ಮತ್ತು ರಾಜ್ಯಸಭೆಯ ಸದಸ್ಯರಿಂದ ಆಯ್ಕೆ ಮಾಡಲಾಗುತ್ತದೆ. ಎನ್‌ಡಿಎ ತನ್ನ ಅಭ್ಯರ್ಥಿಯಾಗಿ ಸಿ.ಪಿ. ರಾಧಾಕೃಷ್ಣನ್ ಅವರನ್ನು ಆಯ್ಕೆ ಮಾಡಿಕೊಂಡಿದ್ದು, ವಿರೋಧಪಕ್ಷಗಳ ಐಎನ್‌ಡಿಐ ಮೈತ್ರಿಕೂಟ ಮಾಜಿ ಸುಪ್ರೀಂಕೋರ್ಟ್ ನ್ಯಾಯಮೂರ್ತಿ ಬಿ. ಸುದರ್ಶನ್ ರೆಡ್ಡಿ ಅವರನ್ನು ಕಣಕ್ಕೆ ಇಳಿಸಿದೆ.

><><><><><><><

ಕಳೆದ ವರ್ಷಕ್ಕಿಂತ ಈ ವರ್ಷ ಕಲ್ಲಿದ್ದಲು ಆಮದು ಶೇಕಡಾ ೯ರಷ್ಟು ಇಳಿಕೆ ಕಂಡಿದೆ ಎಂದು ಕೇಂದ್ರ ಕಲ್ಲಿದ್ದಲು ಮತ್ತು ಗಣಿಗಾರಿಕೆ ಸಚಿವ ಜಿ. ಕಿಶನ್ ರೆಡ್ಡಿ ಹೇಳಿದ್ದಾರೆ. ನವದೆಹಲಿಯಲ್ಲಿ ನಿನ್ನೆ ೧೩ನೇ ಸುತ್ತಿನ ವಾಣಿಜ್ಯ ಕಲ್ಲಿದ್ದಲು ಗಣಿ ಹರಾಜು ಪ್ರಕ್ರಿಯೆಗೆ ಚಾಲನೆ ನೀಡಿ ಮಾತನಾಡಿದ ಅವರು, ದೇಶದ ವಿದ್ಯುತ್ ಅಗತ್ಯ ಹೆಚ್ಚುತ್ತಿರುವಂತೆ ಕಲ್ಲಿದ್ದಲು ಬೇಡಿಕೆಯೂ ನಿರಂತರವಾಗಿ ಏರಿಕೆ ಕಾಣುತ್ತಿದೆ. ೧೨ ಹರಾಜು ಸುತ್ತುಗಳಲ್ಲಿ ೧೩೪ ಗಣಿಗಳ ಹರಾಜು ಮಾಡಲಾಗಿದ್ದು, ಇದರಿಂದ ೪೧ ಸಾವಿರದ ೬೦೦ ಕೋಟಿ ರೂಪಾಯಿ ಹೂಡಿಕೆಗಳು ಹರಿದುಬಂದಿದ್ದು, ೩.೫ ಲಕ್ಷಕ್ಕಿಂತ ಹೆಚ್ಚು ಉದ್ಯೋಗಗಳ ಸೃಷ್ಟಿಯಾಗಿದೆ ಎಂದರು. ೧೩ನೇ ಸುತ್ತಿನಲ್ಲಿ ೧೪ ಹೊಸ ಕಲ್ಲಿದ್ದಲು ಬ್ಲಾಕ್‌ಗಳನ್ನು ಪರಿಚಯಿಸಲಾಗಿದೆ, ಇದು ಆಮದು ಅವಲಂಬನೆ ಮತ್ತಷ್ಟು ಕಡಿಮೆ ಮಾಡುವ ಹಾಗೂ ವಿದೇಶಿ ವಿನಿಮಯ ಉಳಿಸುವತ್ತ ಸಹಕಾರ ನೀಡುತ್ತದೆ ಎಂದು ಅವರು ಹೇಳಿದರು.

><><><><><><><

ಭಾರತೀಯ ರೈಲ್ವೆಯು ೩೮೦ ಗಣಪತಿ ವಿಶೇಷ ರೈಲುಗಳ ಸಂಚಾರಕ್ಕೆ ಅನುವು ಮಾಡಿಕೊಟ್ಟಿದೆ. ಗಣೇಶ ಚತುರ್ಥಿಯ ಪ್ರಯುಕ್ತ ಭಕ್ತರ ಸುಗಮ ಮತ್ತು ಆರಾಮದಾಯಕ ಪ್ರಯಾಣಕ್ಕೆ ಅನುಕೂಲವಾಗುವಂತೆ ವಿಶೇಷ ರೈಲುಗಳನ್ನು ವ್ಯವಸ್ಥೆ ಮಾಡಿದೆ. ೨೦೨೩ರಲ್ಲಿ ೩೦೫ ಕಳೆದ ವರ್ಷ ೩೫೮ ವಿಶೇಷ ಗಣಪತಿ ರೈಲುಗಳ ಸಂಚಾರಕ್ಕೆ ಅವಕಾಶ ಕಲ್ಪಿಸಲಾಗಿತ್ತು. ರೈಲ್ವೆ ಸಚಿವಾಲಯದ ಪ್ರಕಾರ ಮಧ್ಯೆ ರೈಲ್ವೆಯು ಅತೀ ಹೆಚ್ಚು ೨೯೬ ರೈಲುಗಳನ್ನು ಓಡಿಸಲಿದ್ದು, ಮಹಾರಾಷ್ಟ್ರ ಮತ್ತು ಕೊಂಕಣ ಪ್ರದೇಶಗಳಲ್ಲಿನ ಪ್ರಯಾಣಿಕರ ದಟ್ಟಣೆಯನ್ನು ನಿಯಂತ್ರಿಸಲು ಇದು ಸಹಕಾರಿಯಾಗಲಿದೆ.

><><><><><><><

ಭಾರತದ ಮೊದಲ ಮಾನವಸಹಿತ ಬಾಹ್ಯಾಕಾಶ ಯಾನ - ಗಗನಯಾನ್ ಈ ವರ್ಷದ ಡಿಸೆಂಬರ್‌ನಲ್ಲಿ ತನ್ನ ಮೊದಲ ಪರೀಕ್ಷಾರ್ಥ ಹಾರಾಟವನ್ನು ನಡೆಸಲಿದೆ ಎಂದು ಇಸ್ರೋ ಅಧ್ಯಕ್ಷ ವಿ. ನಾರಾಯಣನ್ ಹೇಳಿದ್ದಾರೆ. ನವದೆಹಲಿಯಲ್ಲಿ ನಿನ್ನೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಗಗನಯಾನ ಯೋಜನೆಗೆ ಸಿದ್ಧತೆಗಳು ಉತ್ತಮ ಪ್ರಗತಿಯಲ್ಲಿದ್ದು, ಸುಮಾರು ಏಳು ಸಾವಿರದ ೭೦೦ ಪರೀಕ್ಷೆಗಳನ್ನು ಇಲ್ಲಿಯವರೆಗೆ ನಡೆಸಲಾಗಿದೆ. ಉಳಿದ ಎರಡು ಸಾವಿರದ ೩೦೦ ಪರೀಕ್ಷೆಗಳು ಮುಂದಿನ ವರ್ಷದ ಮಾರ್ಚ್ ವೇಳೆಗೆ ಪೂರ್ಣಗೊಳ್ಳಲಿವೆ ಎಂದು ಅವರು ಮಾಹಿತಿ ನೀಡಿದರು. ಇಸ್ರೋದ ಇತರ ಸಾಧನೆಗಳನ್ನು ಬಗ್ಗೆ ಹೇಳಿದ ನಾರಾಯಣನ್, ಅಮೆರಿಕದ ೬ ಸಾವಿರದ ೫೦೦ ಕಿಲೋಗ್ರಾಂಗಳಷ್ಟು ಸಂವಹನ ಉಪಗ್ರಹವನ್ನು ಭಾರತೀಯ ಲಾಂಚ್‌ಪ್ಯಾಡ್‌ನಿಂದ ಉಡಾವಣೆ ಮಾಡಲಾಗುವುದು ಎಂದು ಅವರು ತಿಳಿಸಿದರು. ಆಕ್ಸಿಯಮ್-೪ ಮಿಷನ್‌ನಲ್ಲಿ ಇಸ್ರೋ ಪಾತ್ರದ ಕುರಿತು ಮಾತನಾಡಿದ ಅವರು, ಮಿಷನ್‌ನ ಸುರಕ್ಷಿತ ಉಡಾವಣೆಯನ್ನು ಖಚಿತಪಡಿಸಿಕೊಳ್ಳುವಲ್ಲಿ ಇಸ್ರೋದ ತಾಂತ್ರಿಕ ಪರಿಣತಿಯು ನಿರ್ಣಾಯಕ ಪಾತ್ರ ವಹಿಸಿದೆ ಎಂದು ಉಲ್ಲೇಖಿಸಿದ್ದಾರೆ. ಫಾಲ್ಕನ್-೯ ರಾಕೆಟ್‌ನ ಮೊದಲ ಹಂತದಲ್ಲಿ ತೊಂದರೆಯನ್ನು ಗಮನಿಸಿದ ಇಸ್ರೋ ಅದನ್ನು ಸರಿಪಡಿಸಿ, ದುರಂತ ವೈಫಲ್ಯವನ್ನು ತಪ್ಪಿಸಿದೆ ಎಂದು ಅವರು ಹೇಳಿದರು. ಮೊದಲ ಭಾರತೀಯ ಗಗನಯಾತ್ರಿ ಶುಭಾಂಶು ಶುಕ್ಲಾ ಅವರನ್ನು ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ಕರೆದೊಯ್ಯಲಾಯಿತು ಮತ್ತು ಸುರಕ್ಷಿತವಾಗಿ ಮರಳಿ ಕರೆತರಲಾಯಿತು. ಆದ್ದರಿಂದ ಆಕ್ಸಿಯಮ್-೪ ಮಿಷನ್ ಪ್ರತಿಷ್ಠಿತ ಮಿಷನ್ ಎಂದು ಅವರು ಪ್ರತಿಪಾದಿಸಿದರು. ಇದು ಕೇವಲ ಹತ್ತು ವರ್ಷಗಳಲ್ಲಿ ಬಾಹ್ಯಾಕಾಶ ಉದ್ಯಮದಲ್ಲಿ, ಮುನ್ನೂರು ಸ್ಟಾರ್ಟ್‌ಅಪ್‌ಗಳನ್ನು ರಚಿಸಲಾಗಿದೆ ಎಂದು ಅವರು ಹೇಳಿದರು. ನಂತರ ಮಾತನಾಡಿದ ವಾಯುಪಡೆಯ ಗ್ರೂಪ್ ಕ್ಯಾಪ್ಟನ್ ಮತ್ತು ಗಗನಯಾತ್ರಿ ಶುಭಾಂಶು ಶುಕ್ಲಾ, ಆಕ್ಸಿಯಮ್-೪ ಮಿಷನ್ ಅನ್ನು ಸಾಧ್ಯವಾಗಿಸಿದ್ದಕ್ಕಾಗಿ ಭಾರತ ಸರ್ಕಾರ ಮತ್ತು ಇಸ್ರೋ ತಂಡಕ್ಕೆ ಧನ್ಯವಾದಗಳನ್ನು ಅರ್ಪಿಸಿದರು.

><><><><><><><

ಜೈವಿಕ ಇಂಧನಗಳನ್ನು ಪೆಟ್ರೋಲಿಯಂ ಉತ್ಪನ್ನಗಳಿಗೆ ಪರ್ಯಾಯವಾಗಿ ಉತ್ತೇಜಿಸುವಲ್ಲಿ ಸರ್ಕಾರವು ಪ್ರಮುಖ ಯಶಸ್ಸು ಸಾಧಿಸಿದೆ ಎಂದು ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲಗಳ ಸಚಿವ ಹರದೀಪ್ ಸಿಂಗ್ ಪುರಿ ಹೇಳಿದ್ದಾರೆ. ಲೋಕಸಭೆಯಲ್ಲಿ ನಿನ್ನೆ ನೀಡಿದ ಲಿಖಿತ ಉತ್ತರದಲ್ಲಿ ಅವರು, ಇಂಧನ ನೀತಿಯ ಮೂಲಕ ಜೈವಿಕ ಇಂಧನ ಬಳಕೆಯನ್ನು ಉತ್ತೇಜಿಸುವ ಕಾರ್ಯ ಕೈಗೊಳ್ಳಲಾಗಿದೆ. ಪೆಟ್ರೋಲಿನಲ್ಲಿ ಎಥನಾಲ್ ಮಿಶ್ರಣವನ್ನು ಪ್ರೋತ್ಸಾಹಿಸುವ ಎಥನಾಲ್ ಮಿಶ್ರಿತ ಪೆಟ್ರೋಲ್ - ಇಬಿಪಿ ಕಾರ್ಯಕ್ರಮವನ್ನು ಜಾರಿಗೆ ತರಲಾಗಿದೆ ಎಂದರು.

><><><><><><><

ಮಹಾರಾಷ್ಟ್ರದ ಪಾಲ್ಘರ್ ಜಿಲ್ಲೆಯ ತಾರಾಪುರ್-ಬೋಯ್ಸರ್ ಕೈಗಾರಿಕಾ ಪ್ರದೇಶದಲ್ಲಿ ನಿನ್ನೆ ಸಂಭವಿಸಿದ ನೈಟ್ರೋಜನ್ ಅನಿಲ ಸೋರಿಕೆಯಿಂದಾಗಿ ೪ ಜನರು ಮೃತಪಟ್ಟಿದ್ದಾರೆ. ಹಾಗೂ ಇಬ್ಬರ ಸ್ಥಿತಿ ಗಂಭೀರವಾಗಿದೆ.

><><><><><><><

ಜಮ್ಮು-ಕಾಶ್ಮೀರದ ಶ್ರೀನಗರದಲ್ಲಿ ಮೊಟ್ಟಮೊದಲ ಖೇಲೋ ಇಂಡಿಯಾ ಜಲಕ್ರೀಡೆಗಳ ಉತ್ಸವಕ್ಕೆ ನಿನ್ನೆ ಕ್ರೀಡಾ ಸಚಿವ ಮನುಸುಖ್ ಮಂಡವಿಯಾ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಜಮ್ಮು ಮತ್ತು ಕಾಶ್ಮೀರದ ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಸೇರಿದಂತೆ ಹಲವಾರು ಗಣ್ಯರು ಉಪಸ್ಥಿತರಿದ್ದರು. ಕ್ರೀಡಾಕೂಟದ ಭಾಗವಾಗಿ ನಡೆದ ಪುರುಷರ ೧ ಸಾವಿರ ಮೀಟರ್ ಕನೋಯಿಂಗ್ ಸ್ಪರ್ಧೆಯಲ್ಲಿ ೧೭ ವರ್ಷದ ಮೊಹ್ಸಿನ್ ಅಲಿ ೪ ನಿಮಿಷ ೧೨ ಸೆಕೆಂಡುಗಳಲ್ಲಿ ಸ್ಪರ್ಧೆ ಪೂರ್ಣಗೊಳಿಸಿ ಒಡಿಶಾ ಮತ್ತು ಮಧ್ಯಪ್ರದೇಶದ ಸ್ಪರ್ಧಿಗಳನ್ನು ಹಿಂದಿಕ್ಕಿ ಸ್ವರ್ಣ ಪದಕ ಜಯಿಸಿದರು. ಪುರುಷರ ೧ ಸಾವಿರ ಮೀಟರ್ ಕನೋಯಿಂಗ್ ಸಿಂಗಲ್ಸ್ ವಿಭಾಗದಲ್ಲಿ ಉತ್ತರ ಪ್ರದೇಶದ ವಿಷಾಲ್ ಕುಮಾರ್, ೪ ನಿಮಿಷ ೩೦ ಸೆಕೆಂಡುಗಳಲ್ಲಿ ಗುರಿ ತಲುಪಿ ಚಿನ್ನದ ಪದಕ ಪಡೆದರು. ಮಹಿಳಾ ೨೦೦ ಮೀಟರ್ ವೈಯಕ್ತಿಕ ವಿಭಾಗದ ಕನೋಯಿಂಗ್ ಸ್ಪರ್ಧೆಯಲ್ಲಿ ಒಡಿಶಾದ ರಸ್ಮಿತಾ ಸಾಹು, ೫೩.೫೩ ಸೆಕೆಂಡುಗಳಲ್ಲಿ ಸ್ಪರ್ಧೆ ಪೂರ್ಣಗೊಳಿಸಿ ಚಿನ್ನದ ಪದಕ ಗೆದ್ದರು. ಮೂರು ದಿನಗಳ ಈ ಕ್ರೀಡಾಕೂಟದಲ್ಲಿ ೨೮ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಂದ ೫೦೦ಕ್ಕೂ ಹೆಚ್ಚು ಅಥ್ಲೀಟ್ಸ್‌ಗಳು ಪಾಲ್ಗೊಳ್ಳುತ್ತಿದ್ದಾರೆ, ಕಯಾಕಿಂಗ್, ಕನೋಯಿಂಗ್ ಮತ್ತು ರೋಯಿಂಗ್‌ನಲ್ಲಿ ಪದಕಗಳಿಗಾಗಿ ಸ್ಪರ್ಧೆ ನಡೆಯುತ್ತಿದೆ. ಶಿಕಾರಾ ಸ್ಪ್ರಿಂಟ್, ಡ್ರಾಗನ್ ಬೋಟ್ ರೇಸ್ ಮತ್ತು ವಾಟರ್ ಸ್ಕೀಯಿಂಗ್ ಇತ್ಯಾದಿಗಳನ್ನು ಪ್ರದರ್ಶನ ಸ್ಪರ್ಧೆಗಳಾಗಿ ಆಯೋಜಿಸಲಾಗಿದೆ.

><><><><><><><

ಇದೇ ೨೯ರಂದು ಆಚರಿಸಲಾಗುವ ರಾಷ್ಟ್ರೀಯ ಕ್ರೀಡಾ ದಿನದ ಅಂಗವಾಗಿ ದೇಶದ ಪ್ರತಿಯೊಬ್ಬ ನಾಗರಿಕನು ದೈನಂದಿನ ಜೀವನದಲ್ಲಿ ಕನಿಷ್ಠ ಒಂದು ಗಂಟೆ ಫಿಟ್‌ನೆಸ್ ಮತ್ತು ಕ್ರೀಡೆಗಳಿಗೆ ಮೀಸಲಿಡಬೇಕೆಂದು ಯುವ ವ್ಯವಹಾರ ಮತ್ತು ಕ್ರೀಡಾ ಸಚಿವ ಡಾ. ಮನ್ಸುಖ್ ಮಂಡವಿಯಾ ಕರೆ ನೀಡಿದ್ದಾರೆ.

><><><><><><><